## ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 469

2 ಸದಸ್ಯರ ಹೆಸರು : ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

3 ಉತ್ತರಿಸುವ ದಿನಾಂಕ : 22-12-2022

4 ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಸತಿ ನಿವೇಶನಗಳನ್ನು ವಾಣಿಜ್ಯ ಕಟ್ಟಡಗಳಾಗಿ ಬಿ.ಬಿ.ಎಂ.ಪಿಯ ಅನುಮೋದಿತ ಯೋಜನೆಯಿಲ್ಲದೇ ವಲಯ ನಿಯಂತ್ರಣವನ್ನು ಉಲ್ಲಂಘಿಸಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಯಾವ ಕಾನೂನು ಕ್ರಮ ಕೈಗೊಳ್ಳಲಾಗಿದೆಯೇ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಲಯ ನಿಯಮಾವಳಿ-2015 ಹಾಗೂ ಕಟ್ಟಡ ಉಪವಿಧಿ-2003ರ ನಿಯಮಗಳನ್ವಯ ನಕ್ಷೆ ಮಂಜೂರಾತಿಯನ್ನು ನೀಡಲಾಗುತ್ತದೆ. ಕಟ್ಟಡದ ಮಾಲೀಕರು ಮಂಜೂರಾತಿ ನಕ್ಷೆಯನ್ನು ಉಲ್ಲಂಘಿಸಿ, ಕಟ್ಟಡ ನಿರ್ಮಿಸಿದರೆ ಅಥವಾ ಕಟ್ಟಡದ ಉಪಯೋಗವನ್ನು ಬದಲಾವಣೆಗೊಳಿಸಿದ್ದಲ್ಲಿ, ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 248(1)(2)(3) ಹಾಗೂ 356(1)(2) ರನ್ವಯ ಬಿಬಿಎಂಪಿಯ ಆಯಾ ಉಪ ವಿಭಾಗದ ಅಧಿಕಾರಿಗಳು / ನಗರ ಯೋಜನಾ ಅಧಿಕಾರಿಗಳಿಂದ ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ) | ಬನಶಂಕರಿ 2ನೇ ಹಂತ 22ನೇ ಕ್ರಾಸ್‌ನಲ್ಲಿ ವಲಯ ನಿಯಂತ್ರಣ ಉಲ್ಲಂಘಿಸಿ ಅಕ್ರಮವಾಗಿ ವಾಣಿಜ್ಯ ಕಟ್ಟಡಗಳನ್ನು ಕಟ್ಟುತ್ತಿರುವುದಕ್ಕೆ ಬಿ.ಬಿ.ಎಂ.ಪಿ ನೀಡಿರುವ ಎರಡು ನೋಟಿಸುಗಳಿಗೂ ವಾಣಿಜ್ಯ ಉದ್ದಿಮೆದಾರರನ್ನು ಗಣನೆಗೆ ತೆಗೆದುಕೊಳ್ಳದೇ ಇರುವುದರಿಂದ ಕಾನೂನು ಕ್ರಮ ಕೈಗೊಳ್ಳಲಾಗಿದೆಯೇ: ಇಲ್ಲವಾದ್ದಲ್ಲಿ, ಕಾರಣವೇನು; | ಬನಶಂಕರಿ 2ನೇ ಹಂತದ 22ನೇ ಅಡ್ಡರಸ್ತೆಯಲ್ಲಿ ಎರಡು ಕಟ್ಟಡಗಳು ನಿರ್ಮಾಣ ಹಂತದಲ್ಲಿರುತ್ತದೆ. ಅದರಲ್ಲಿ ಒಂದು ಕಟ್ಟಡಕ್ಕೆ ವಸತಿ ಕಟ್ಟಡ ಮಂಜೂರಾತಿ ಪಡೆದು, ವಾಣಿಜ್ಯ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಆದ್ದರಿಂದ, ಮೂರು ಕಟ್ಟಡಗಳಿಗೆ ಬಿಬಿಎಂಪಿ ಕಾಯ್ದೆ 2020ರ ಅನ್ವಯ ನೋಟೀಸ್‌ಗಳನ್ನು ಜಾರಿ ಮಾಡಲಾಗಿದ್ದು ಹಾಗೂ ಮತ್ತೊಂದು ಸ್ವತ್ತಿನಲ್ಲಿ ಹಾಲಿ ಇದ್ದಂಥ ಹಳೆಯ ವಸತಿ ಕಟ್ಟಡದ ಮುಂಭಾಗದ ಖಾಲಿ ಸ್ಥಳದಲ್ಲಿ ತಾತ್ಕಾಲಿಕ ಕಬ್ಬಿಣದ ಮೇಲ್ಛಾವಣಿಯನ್ನು ವಿಸ್ತರಿಸುತ್ತಿರುವುದು ಗಮನಕ್ಕೆ ಬಂದಿದ್ದು, ಅದರಂತೆ, ಕಟ್ಟಡದ ಮಾಲೀಕರಿಗೆ ಈ ನಿರ್ಮಾಣದ ಕುರಿತಂತೆ ಅಧಿಕೃತ ದಾಖಲಾತಿಗಳನ್ನು ಸಲ್ಲಿಸುವ ಸಂಬಂಧ ಬಿಬಿಎಂಪಿ ಕಾಯ್ದೆ 2020 ರಡಿಯಲ್ಲಿ ನೋಟೀಸ್‌ಗಳನ್ನು ನೀಡಲಾಗಿರುತ್ತದೆ. ಸದರಿ ನೋಟೀಸ್‌ಗಳಿಗೆ ಯಾವುದೇ ರೀತಿಯ ಉತ್ತರವಾಗಲೀ ಅಥವಾ ದಾಖಲಾತಿಗಳನ್ನಾಗಲೀ ನೀಡಿರುವುದಿಲ್ಲ. ಈ ಹಿನ್ನಲೆಯಲ್ಲಿ, ಆರೋಗ್ಯ ವೈದ್ಯಾಧಿಕಾರಿಗಳು, ಪದ್ಮನಾಭನಗರ ವಲಯ ರವರಿಗೆ ಪತ್ರ ಮುಖೇನ ಯಾವುದೇ ರೀತಿಯ ಟ್ರೇಡ್ ಲೈಸೆನ್ಸ್‌ಅನ್ನು ನೀಡಬಾರದೆಂದು ಸೂಚಿಸಲಾಗಿರುತ್ತದೆ. |
| ಇ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಂದಗತಿ ನೀತಿಯಿಂದಾಗಿ ವಸತಿ ಪ್ರದೇಶದವರು ನ್ಯಾಯಕ್ಕಾಗಿ ಕೋರ್ಟ್ ಮೊರೆ ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರದ ಕ್ರಮವೇನು? | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬಿಬಿಎಂಪಿ ಕಾಯ್ದೆ 2020 ರನ್ವಯ ಕಾರ್ಯನಿರ್ವಹಿಸುತ್ತಿದ್ದು, ಅಂತಹ ಪ್ರಕರಣಗಳು ಕಂಡು ಬಂದಲ್ಲಿ, ಕೂಡಲೇ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. |

ನಅಇ 554 ಎಂಎಸ್‌ಯು 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ